ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 20th July, 1981/Ashada 29, 1903

The House met in the Assembly Chamber, Vidhana Soudha at one of the Clock.

[MR. SPEAKER (SRI K. H. RANGANATH) in the Chair]

STARRED QUESTIONS

(to which oral answers were given)

* Amount spent on foreign tour of the Managing Directors of Karnataka Dairy

87. SRI S. S. ARAKERI (Ballolli)—Will the Minister for Law and Parliamentary Affairs and Animal Husbandry and Veterinary Services be pleased to state :—

(a) total number of foreign countries visited by the Managing Directors of Karnataka Dairy Development since 1978 and the purpose of visit ;

(b) total expenditure involved for these foreign countries tour of the Managing Directors ;

(c) whether these Managing Directors after gaining experience study could get time to improve the Karnataka Dairy Development Corporation ;

(d) the total net profits made from 1978 ;

(e) if not, total loss incurred by the Corporation since 1978 ?

SRI Y. RAMAKRISHNA (Minister for Law and Parliamentary Affairs and Animal Husbandry and Veterinary Services).—

(a) One visit to Australia, Newzealand and back in December 1978.

(b) Rs. 48,785.00.

(c) Yes.
(d) Nil.
(e) 1977—78 .. loss Rs. 86 lakhs
1978—79 .. loss Rs. 137 lakhs
1979—80 .. loss Rs. 169 lakhs.

ಶ್ರೀ ಎಸ್.ಎಸ್. ಆರಕೇರಿ.—೧೯೭೮ರಿಂದ ಕರ್ನಾಟಕ ಹೈನುಂ ಅಭಿವೃದ್ಧಿ ಸಂಸ್ಥೆಯ ಕಾರ್ಯ ನಿರ್ವಾಹಕ ಸಂಚಾಲಕರುಗಳು ವಿದೇಶಗಳಿಗೆ ಒಟ್ಟು ಎಷ್ಟು ಬಾರಿ ಭೇಟಿ ನೀಡಿದ್ದಾರೆ ಹಾಗೂ ಭೇಟಿಯ ಉದ್ದೇಶವೇನು ಎಂದು ಕೇಳಿದ್ದಕ್ಕೆ ೧೯೭೮ನೇ ಡಿಸೆಂಬರ್ ಪಾಹೆಯಲ್ಲಿ ಒಂದು ಬಾರಿ ಆಸ್ಟ್ರೇಲಿಯ ಹಾಗೂ ನ್ಯೂಜಿಲೆಂಡ್ ದೇಶಗಳಿಗೆ ಹೋಗಿ ಬಂದಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ಯಾರ್ಯಾರು ಹೋಗಿದ್ದಾರೆಂಬುದನ್ನು ದಯಮಾಡಿ ಪೆಸರುಗಳನ್ನು ತಿಳಿಸುತ್ತೀರಾ?.

ಶ್ರೀ ವೈ. ರಾಮಕೃಷ್ಣ.—ಒಟ್ಟು ೪೮,೭೮೫ ರೂಪಾಯಿಗಳು ವಿಚಾರಿಗಿರುತ್ತವೆ. ಈ ವರ್ಷದಲ್ಲಿ ಒಬ್ಬರೇ ಹೊರದೇಶಕ್ಕೆ ಹೋಗಿಬಂದಿದ್ದಾರೆ. ಇದುವರೆಗೂ ಹೋಗಿರುವವರು ಸನ್ಮಾನ್ಯ ಶ್ರೀ ಎನ್. ಚಿಕ್ಕೇಗೌಡ ಆವರು ಮಂತ್ರಿಗಳಾಗಿದ್ದಾರೆ ಹೋಗಿದ್ದಾರೆ. ಪಂತ್ತು ದೇವೆಂದ್ರಪ ಫಾಳಪ್ಪ ಆವರು ಕೂಡ ಮಂತ್ರಿಗಳಾಗಿದ್ದಾಗ ಹೋಗಿದ್ದಾರೆ. ಬಿ ಎಸ್. ಮುದ್ದಪ್ಪ ಆವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ ಹೋಗಿ ಬಂದಿದ್ದಾರೆ. ಶ್ರೀ ಬಿ.ಪಿ.ಕರಂಬಿಯ್ಯ ಆವರು ಟೆಕ್ನಿಕಲ್ ಡೈರೆಕ್ಟರ್ ಆಗಿದ್ದಾಗ ಹೋಗಿ ದ್ದಾರೆ. ಶ್ರೀಮಾನ್ ಇರಣ್ಣಿಯ್ಯ ಆವರು ಚೀಫ್ ಜನರಲ್ ಮ್ಯಾನೇಜರ್ ಆಗಿದ್ದಾಗ ಹೋಗಿದ್ದಾರೆ. ಜೊತೆಗೆ ಶ್ರೀ ಎಂ.ಪಿ. ಪುಟ್ಟಣ್ಣ ಆವರು ತುಮಕೂರಿ ಯೂನಿಯನ್ನಿನ ಅಧ್ಯಕ್ಷರಾಗಿದ್ದಾಗ,ಶ್ರೀಚೌಡಯ್ಯ ಬೆಂಗಳೂರು ಯೂನಿಯನ್ನಿಂದ. ಶ್ರೀ ಕೆ.ವಿಚ್. ಹನುಮೇಗೌಡ ಹಾಸನ ಯೂನಿಯನ್ನಿಂದ. ಮತ್ತು ಶ್ರೀ ಆನಂದನ್‌ರವರು ಮೈಸೂರು ಯೂನಿಯನ್ನಿನಿಂದ, ಕಂಪನಿ ಸೆಕ್ರಟರಿ ಶ್ರೀ ನವಾಡ್‌ರವರು ಹೋಗಿದ್ದಾರೆ. ಶ್ರೀ ವಿಶ್ವನಾಥ್, ಮ್ಯಾನೆಜಿಂಗ್ ಡೈರೆಕ್ಟರ್ ಆವರು ಹೋಗಿದ್ದಾರೆ. ಒಟ್ಟು ೨೦ ಜನ ಹೊರದೇಶಗಳಿಗೆ ಹೋಗಿದ್ದಾರೆ, ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ಕೊಟ್ಟಿರತಕ್ಕ ಹಣ ಶ್ರೀ ವಿಶ್ವನಾಥ್‌ರವರು ಹೋಗಿ ದ್ದಾಗ ವಿಚಾರ್ಗಿರತಕ್ಕ ಹಣ.

ಶ್ರೀ ಎಸ್.ಎಸ್. ಆರಕೇರಿ.—ಆವರೆಲ್ಲರೂ ಹೊರದೇಶಗಳಿಗೆ ಹೋಗಿರುವುದರಿಂದ ಒಟ್ಟು ಎಷ್ಟು ಹಣ ರಾಜ್ಯದ ಬೊಕ್ಕಸಕ್ಕೆ ವಿಚಾರ್ಗಿದೆ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ?.

ಶ್ರೀ ವೈ. ರಾಮಕೃಷ್ಣ.—ಇದಕ್ಕಾಗಿ ಇಟ್ಟಿರತಕ್ಕ ಹಣ ೨೦ ಲಕ್ಷ ರೂಪಾಯಿಗಳು. ಆದರಲ್ಲಿ ೧೦ ಲಕ್ಷ ಈಗಾಗಲೇ ವಿಚಾರ್ಗಿವೆ. (ಇ)ಗೆ ಉತ್ತರವಾಗಿ ಹೇಳುತ್ತಾ, ಆವರು ಹೊರದೇಶಗಳಿಗೆ ಹೋಗಿ ಅನುಭವ ಪಡೆದುಕೊಂಡು ಬಂದು ಡೈರಿಯನ್ನು ಉತ್ತಮಪಡಿಸಲು ಆವರಿಗೆ ಕಾಲಾವಕಾಶ ಸಿಗುತ್ತದೆಯೆ ಎಂಬುದಕ್ಕೆ .ಹೌದು' ಎಂದು ಹೇಳಿದ್ದೇವೆ. ಮ್ಯಾನೇಜಿಂಗ್ ಡೈರೆಕ್ಟರ್‌ವರು ಹೊರದೇಶಕ್ಕೆ ಹೋಗಿ ಅನುಭವ ಪಡೆದುಕೊಂಡು ಬಂದು ಡೈರಿಗೆ ಲಾಭ ಮಾಡುವುದಕ್ಕೆ ಸಹಾಯಕವಾಗಿದ್ದಾರೆಂದು ತಿಳಿ ಸುತ್ತಾ (ಉ)ಗೆ ಉತ್ತರವಾಗಿ ೧೯೭೭-೭೮ರಲ್ಲಿ ೮೭ಲಕ್ಷ ನಷ್ಟವಾಗಿದೆ. ೧೯೭೮-೭೯ರಲ್ಲಿ ೧.೩೭ ಲಕ್ಷ ನಷ್ಟ ವಾಗಿದೆ, ೧೯೭೯-೮೦ರಲ್ಲಿ ೧.೬೯ ಲಕ್ಷ ನಷ್ಟವಾಗಿದೆ. ಹೀಗೆ ವರ್ಷೇ ವರ್ಷೆ ಕ್ರಮವಾಗಿ ಮೂರು ವರ್ಷ ಗಳಲ್ಲಿ ಸುಮಾರು ೩½ ಕೋಟಿ ರೂಪಾಯಿಗಳು ನಷ್ಟವಾಗಿದೆ.

ಶ್ರೀ ಎಸ್.ಎಸ್. ಆರಕೇರಿ.—ಈ ಮೂರು ವರ್ಷಗಳಲ್ಲಿ ಅನುಭವ ಪಡೆದುಕೊಂಡು ಬಂದು ನಷ್ಟ ಪೂಡಂವುದಕ್ಕೆ ಅನುಭವ ಪಡೆದುಕೂಂಡು ಬಂದರೆ, ಅಥವಾ ಬೇರೆ ಕಾರಣವಿದೆಯೇ? ಇದಕ್ಕೆ ಹೊಣೆಗಾ ರಿಕೆ ಯಾರು? ಇದನ್ನು ದಯಮಾಡಿ ತಿಳಿಸಿ?.

ಶ್ರೀ ವೈ. ರಾಮಕೃಷ್ಣ —ಇದರ ಪೆಡ್ ಆಕೌಂಟ್ ಬೇರೆ. ಇದು ವರ್ಲ್ಡ್ ಪ್ರಾಜೆಕ್ಟ್, ಈ ಪ್ರಾಜೆಕ್ಟ್‌ನಲ್ಲಿ ಎಸೆನ್ಸಿಯಲ್ ಪ್ರೊಗ್ರಾಮ್ ಎಂದು ಇದಕ್ಕೆ ಸುಮಾರು ೨೦ ಲಕ್ಷ ತೆಗೆದು ಇಟ್ಟಿದ್ದೇವೆ. ನಮಗೆ ನಷ್ಟವಾಗಿರತಕ್ಕದ್ದು ಓವರ್ ಪೆಡ್ ಚಾರ್ಜಸ್, ಕರ್ನಾಟಕದಲ್ಲಿ ಅಲ್ಲ, ಇಂಡಿಯ ದೇಶದಲ್ಲೂ ಅಲ್ಲ, ಇಡೀ ಪ್ರಪಂಚದಲ್ಲೇ ಎಲ್ಲೇ ಆಗಲಿ ಯಾವ ಪಾಲಿನಡೈರಿಯೂ ಕೂಡ ಲಾಭದಾಯಕ

ವಾಗಿಲ್ಲ. ಒವರ್‌ಹೆಡ್ ಚಾರ್ಜಸ್ ಕೊಡಬೇಕಾಗುತ್ತದೆ, ಆದ್ದರಿಂದ ಅಷ್ಟು ನಷ್ಟವಾಗಿದೆ. ವಿದೇಶಗಳಿಗೆ ಹೊದಂತಹ ಖರ್ಚಿಗೂ ಒವರ್ ಹೆಡ್ ಚಾರ್ಜ್‌ಗೂ ಸಂಬಂಧವಿಲ್ಲ. ಮತ್ತು ಅನುಭವ ಕೇಳಿದರು ಮಾನ್ಯ ವಿಶ್ವನಾಥ್‌ರವರು ಫಾರಿನ್ ಹೋಗಿ ಬಂದಮೇಲೆ ಮೂರು ವರ್ಷಗಳ ಕಾಲ ಡೈರಿಯಲ್ಲಿ ಡೈರೆಕ್ಟರ್ ಆಗಿದ್ದಾರೆ. ಡೈರಿಗೆ ಅನೇಕ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಬಂದು ಇವತ್ತು ಮೈಸೂರಿನಲ್ಲಿ ಪ್ರಾಜೆಕ್ಟ್ ಬಂದಿದೆ, ತುಮಕೂರಿನಲ್ಲಿ ಪ್ರಾಜೆಕ್ಟ್ ಬಂದಿದೆ, ಧಾರವಾಡದಲ್ಲಿ ಪ್ರಾಜೆಕ್ಟ್ ಬರುತ್ತಿದೆ, ಆದೇರೀತಿ ಬೆಂಗಳೂರಿನಲ್ಲಿ ಫೌಡರ್ ಪ್ರಾಜೆಕ್ಟ್ ಬಂದಿದೆ. ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಟೆಕ್ನಿಕಲ್ ಸೈಡ್‌ನಿಂದ. ೧೬ ಜನ ಹೋಗಿದ್ದಾರೆ ಹೋಗಿಬಂದವರೆಲ್ಲಾ ರಿಪೋರ್ಟ್ ಕೊಟ್ಟಿದ್ದಾರೆ ಡೈರಿ ಬಹಳ ಚೆನ್ನಾಗಿ ನಡೆಯುತ್ತಿದೆ.

ಶ್ರೀ ಎಸ್.ಎಸ್. ಅರಕೇರಿ.—ಸಚಿವರು ಯೋಜನೆಗಳಿಂದ ಅನುಕೂಲವಾಗುತ್ತಿದೆಂದು ಹೇಳುತ್ತಿದ್ದಾರೆ. ಡೈರಿಯಲ್ಲಿ ಎಲ್ಲಿ ನೋಡಿದರೂ ಮೂರುವರೆ ಕೋಟಿ ರೂಪಾಯಿ ಲಾಸ್ ಆಗುತ್ತಿದೆ. ತಮ್ಮ ಕಾಲದಲ್ಲಾದರೂ ಸರ್ಕಾರಕ್ಕೆ ಲಾಸ್ ಆಗದೆ, ಹೆಚ್ಚು ಆದಾಯ ಬರುವ ರೀತಿಯಲ್ಲಿ ಮಾಡುವುದಕ್ಕೇನಾದರೂ Whether you got have anynew scheme to reduce the loss, which is growing year after year.

SRI Y. RAMAKRISHNA.—It is under examination of the Government.

ಇಂಡಿಯಾದೇಶದಲ್ಲಿರತಕ್ಕ ಪ್ರತಿಯೊಂದು ರಾಜ್ಯ ನಡೆಸತಕ್ಕ ಡೈರಿಗಳಲ್ಲಿ ಲಾಸ್ ಆಗುತ್ತಿವೆ, ಅದರಲ್ಲಿ ಕರ್ನಾಟಕವೂ ಒಂದು. ತಮಗೆ ಮತ್ತೊಂದು ಹೇಳಬೇಕಾದರೆ ಇಂಡಿಯಾದೇಶದಲ್ಲಿ ಸುಮಾರು ೪೦ ಕೋಟಿ ರೂಪಾಯಿ ಈ ದಿಶೆಯಲ್ಲಿ ನಷ್ಟವಾಗುತ್ತಿದೆ. ನಮ್ಮದು ೨ ಕೋಟಿ ಕೂಡ ಆಗಿಲ್ಲ, ಒವರ್‌ಹೆಡ್ ಚಾರ್ಜ್ ಎಂದು ಹೇಳುತ್ತಿದ್ದೀರಿ ಇದಕ್ಕೂ ಡೈರಿ ಅಪರೇಷನ್ಸ್‌ಗೂ ಸಂಬಂಧವಿಲ್ಲ ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಎಸ್.ಎಸ್. ಅರಕೇರಿ.—ಇಂಡಿಯಾದೇಶದಲ್ಲಿ ಎಲ್ಲಾ ಕಡೆ ಲಾಸ್ ಆಗುತ್ತದೆ ಅಂದರೆ ನಮ್ಮದೂ ಲಾಸ್ ಆಗಬೇಕೆಂದು ಏನಾದರೂ ಕಾನೂನು ಇದೆಯೆ? Let not the Hon'ble Minister take defence on such a basis. ಬಹುಶಃ ಈ ತರಹ ಮನೋಭಾವನೆ ಇಟ್ಟುಕೊಳ್ಳುವುದಾದರೆ ಡೈರಿ ಅಭಿವೃದ್ಧಿ ಮಾಡಲ್ಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ ಅನ್ನಿಸುತ್ತದೆ ಆದಕ್ಕೆ ಮಾನ್ಯಮಂತ್ರಿಗಳು ಏನು ಹೇಳುತ್ತಾರೆ?.

SRI Y. RAMAKRISHNA.—These are two different issues. ನಾನು ಹೇಳತಕ್ಕದ್ದು It is not a commercial concern. Dairy is more a service organisation. ಇವತ್ತು ಪೋಲಿಸ್ ಇಲಾಖೆ, ಕಾನೂನು ಇಲಾಖೆ ಎಷ್ಟು ಮುಖ್ಯವಾದುದೋ ಅಷ್ಟೇ ಮುಖ್ಯವಾದುದು ಈ ಡೈರಿ ಇಲಾಖೆ. ದುರ್ಬಲ ವರ್ಗದವರಿಗೆ, ಸ್ಕೂಲ್ ಮಕ್ಕಳಿಗೆ, ಪಾಯಿಲೆ ಇರುವವರಿಗೆ ಹಾಲನ್ನು ಒದಗಿಸಬೇಕಾಗುತ್ತದೆ, ಆದರಿಂದ ನಷ್ಟವಾಗುತ್ತದೆ, ನಷ್ಟವಾಗುತ್ತದೆಂದು ಬಿಡುವುದಕ್ಕಾಗುವುದಿಲ್ಲ, ನಡೆಸಬೇಕಾಗುತ್ತದೆ. ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ, ಆದ್ದರಿಂದ ಕನ್‌ವೇಯನ್ಸ್ ಜಾಸ್ತಿಕೊಡಬೇಕಾಗುತ್ತದೆ. ಸೊಸೈಟಿಗಳನ್ನು ಜಾಸ್ತಿಮಾಡಿದಾಗ ಪ್ರತಿಯೊಂದು ಸೊಸೈಟಿಗೂ ಇವತ್ತು ೪,೫೦೦ ಸಬ್ಸಿಡಿ ಮತ್ತು ಸಾಲ ಕೊಡಬೇಕಾಗಿದೆ. ಈಗಾಗಲೇ ಸಾವಿರಾರು ಅರ್ಜಿಗಳು ಬಂದಿವೆ ಇದಕ್ಕೆಲ್ಲಾ ಒವರ್ ಹೆಡ್ ಚಾರ್ಜಸ್ ಜಾಸ್ತಿಯಾಗಿದೆ. It is a necessity.

ಶ್ರೀ ಎಸ್.ಎಸ್. ಅರಕೇರಿ.—ಬಿಜಾಪುರಕ್ಕೆ ನಾವು ಡೈರಿ ಕೇಳಿದ್ದೇವೆ, ತಾವು ಕೊಡುತ್ತೇವೆಂದು ಹೇಳುತ್ತಾ ಬಂದಿದ್ದೀರಿ. ಬಿಜಾಪುರದಲ್ಲಿ ಯಾವಾಗ ಡೈರಿಯನ್ನು ಪ್ರಾರಂಭ ಮಾಡುತ್ತೀರಿ? ಲಾಸ್ ಆಗುತ್ತಿದೆ ಎಂದು ಏನಾದರೂ ಅಲ್ಲಿ ಪ್ರಾರಂಭ ಮಾಡುವುದಕ್ಕೆ ಮುಂದೆ ಬರಲಿಲ್ಲವೆ? ದಯವಿಟ್ಟು ಇದರ ಬಗ್ಗೆ ತಿಳಿಸಿ ಸ್ವಾಮಿ.

ಶ್ರೀ ವೈ. ರಾಮಕೃಷ್ಣ.—ಬಿಜಾಪುರದಲ್ಲಿ ಈಗ ೫೦ಲಕ್ಷ ಖರ್ಚುಮಾಡಬೇಕೆಂದು ನಿಗದಿ ಮಾಡಿದ್ದೇವೆ. ಲ್ಯಾಂಡ್ ಆಕ್ವೈರ್ ಆಗಿಲ್ಲ ಪದೇ ಪದೇ ರಿಪ್ರೆಸೆಂಟರ್ ಕೊಡುತ್ತಿದೇವೆ ಭೂಮಿ ಸಮಗ್ರ ಯಾವಾಗ ಸ್ವಾಧೀನಕ್ಕೆ ಬರುತ್ತದೆಯೋ ಅವತ್ತಿನಿಂದಲೇ ತಕ್ಷಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಎಸ್. ಅರಕೇರಿ.—ಇಡೀ ಕರ್ನಾಟಕ ರಾಜ್ಯದಲ್ಲಿ ಡೈರಿ ಡೆವಲಪ್‌ಮೆಂಟ್ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಸಚಿವರು ಹೇಳಿದ್ದಾರೆ. ಅದರಲ್ಲಿ ಒಂದು ಆದರೂ ಕೂಡ ಲಾಸ್ ಆಗದಂತೆ ಮಾಡಿ ಲಾಭ ಬರುವ ದಿಶೆಯಲ್ಲಿ ಯಾವುದಾದರೂ ಸ್ಪೆಷಲ್ ಸ್ಕೀಮ್‌ಗಳನ್ನು ಹಾಕಲಿಕ್ಕೆ ಈಗಲಾದರೂ ಸಾಧ್ಯವಿದೆಯೇ?

SRI Y. RAMAKRISHNA.—I have already answered the question tha the matter is under examination of the Government.

* Grant of Land in S. No. 546 of Srirangapatna Taluk

142. SRI M. SRINIVAS (Srirangapatna)—Will the Minister for Revenue be pleased to state :—

(a) the extent of land in Survey No. 546 of Kiranguru Village, Srirangapatna taluk ;

(b) the name of the person to whom this land was granted under Dharkast ?

SRI MALLIKARJUNA M. KHARGE (Minister for Revenue).—

(a) 6 Acres and 37 guntas.

(b) Three acres of land has been granted to Sri M. P. Bangaraswamy.

ಶ್ರೀ ಎಂ. ಶ್ರೀನಿವಾಸ್.—ಸ್ವಾಮಿ, (ಆ)ಗೆ ಉತ್ತರವಾಗಿ ಶ್ರೀ ಎಂ.ಪಿ. ಬಂಗಾರಸ್ವಾಮಿ ಎಂಬುವರಿಗೆ ಮೂರು ಎಕರೆ ಮಂಜೂರು ಮಾಡಲಾಗಿದೆ ಅಂತ ಹೇಳಿದ್ದೀರಿ. ಆದನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದೀರಾ ಆನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಮಲ್ಲಿರತಕ್ಕಂಥಾ ರೆಕಾರ್ಡ್ ಪ್ರಕಾರ ಅವರಿಗೆ ಅಗ್ರಿ-ಕಲ್‌ಚರ್ ಪರ್ಪಸ್‌ಗೆ ಕೊಟ್ಟಿದೆ.

ಶ್ರೀ ಎಂ. ಶ್ರೀನಿವಾಸ್.—ಆ ೩ ಎಕರೆ ಜಮೀನು ಏನು ಇದೆ ಅವು ಕಲ್ಲುಬಂಡೆಗಳು ಮತ್ತು ಕ್ವಾರಿ ಆಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರಿಗೆ ಆ ಜಮೀನನ್ನು ಅಗ್ರಿಕಲ್‌ಚರ್ ಪರ್ಪಸ್‌ಗೆ ಅಂತ ಕೊಟ್ಟಿದ್ದೇವೆ. ಅದು ಕ್ವಾರಿ ಆಗಿದೆ ಅನ್ನುವುದನ್ನು ಈ ಸಂದರ್ಭದಲ್ಲಿ ಹೇಳಿದ್ದೀರಿ, ಅದರ ಬಗ್ಗೆ ಸರಿಯಾದ ಮಾಹಿತಿ ಕೊಟ್ಟರೆ ಪರಿಶೀಲಿಸುತ್ತೇನೆ.

ಶ್ರೀ ಎಂ. ಶ್ರೀನಿವಾಸ್.—ಈ ೩ ಎಕರೆ ಜಮೀನನ್ನೂ ಕೂಡ ಅವರಿಗೆ ದರ ಖಾಸ್ತ ಮುಖಾಂತರ ಅಗ್ರಿಕಲ್‌ಚರ್ ಪರ್ಪಸ್‌ಗೆ ಕೊಟ್ಟಿದ್ದೀರಿ ಆದರೆ ಆ ೩ ಎಕರೆ ಜಮೀನೂ ಸಹ ಕ್ವಾರಿ ಆಗಿದ್ದು ಅದನ್ನು ಲೈಸನ್ಸ್ ಇಲ್ಲದೆ ಎಕ್ಸ್‌ಪ್ಲೋಸಿವ್ ಮಾಡುತ್ತಾ ಇದ್ದಾರೆ. ಅದರಿಂದ ಆ ಬಗ್ಗೆ ಗಲಾಟೆ ಉದ್ಭವವಾಯಿತು. ಈ ಕಾರಣದಿಂದ ನಾನು ಈ ಪ್ರಶ್ನೆ ಕೇಳುತ್ತಾ ಇರುವುದು. ಆ ಕ್ವಾರಿ ಜಮೀನು ಏನೂ ಇದೆ ಅದು ಅಗ್ರಿ ಕಲ್‌ಚರ್ ಪರ್ಪಸ್‌ಗೆ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲಾ. ಅದು ಊರಿನ ಹತ್ತಿರವೇ ಇರುವುದರಿಂದ